ಸಂಪುಟ : 41 ಸಂಚಿಕೆ 102 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 19ಜೂನ್ 2017 ಸೋಮವಾರ POST REG NO . L-2/RNP- 364/TMR/2015-17 ಪುಟಗಳು : 08 ಬೆಲೆ ₹ 2.00

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ

ಸಂಪಾದಕರು : ಎಸ್. ನಾಗಣ್ಣ

E-mail : prajapragathi2@gmail.com
Web : prajapragathi.com



ಭಾರತದ ಶ್ರೀಕಾಂತ್ ಮುಡಿಗೆ ಇಂಡೋನೇಷ್ಯಾ ಬ್ಯಾಡ್ಮಿಂಟನ್ ಪ್ರಶಸ್ತಿ



ದ.ಭಾರತದ ನದಿಜೋಡಣೆಗಾಗಿ 1 ಕೋಟಿ ರೂ. ಸಹಾಯಧನ ನೀಡಿದ ರಜನಿಕಾಂತ್

ಅಂಗಾಂಗ ದಾನಿಗಳಿಗೂ ಆಧಾರ್ ಕಡ್ಡಾಯ : ಶಾಲಿನಿ ರಜನೀಶ್

AADHAR

## ಚೌಡೇಶ್ವರಿ ಸಮುದಾಯ ಭವನ ಉದ್ಘಾಟನೆ
## ಬೇಸಿಗೆಯಲ್ಲಿ ನೀರಿಗೆ 8 ಕೋಟಿ ರೂ.ವೆಚ್ಚ

**ಚಿತ್ರದುರ್ಗ**

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನೀರಿನ ಅಭಾವ ತಲೆದೋರಿದ್ದರಿಂದ 73 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಒಟ್ಟು ಕುಡಿಯುವ ನೀರಿಗಾಗಿ 8 ಕೋಟಿಗೂ ಹೆಚ್ಚು ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿ ತಿಳಿಸಿದರು

ಚಿತ್ರದುರ್ಗ ನಗರದ ದೊಡ್ಡಪೇಟೆಯ ಜೈನ್ ದೇವಾಲಯದ ಹಿಂಭಾಗದಲ್ಲಿನ ಜವೇಳರ ಬೀದಿಯಲ್ಲಿ ಭಾನುವಾರ ಶಾಸಕರ ಅನುದಾನದಲ್ಲಿ ನಿರ್ಮಾಣಮಾಡಲಾದ ಶ್ರೀ ಚೌಡೇಶ್ವರಿ ಸಮುದಾಯ ಭವನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಭಾಗದಲ್ಲಿ ನೀರಿನ ಸಮಸ್ಯೆ ಇದ್ದಾಗ ಜನತೆಯ ಬೇಡಿಕೆಯಂತೆ ಕೊಳವೆಬಾವಿ ಕೊರೆಸಿ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ನಗರಕ್ಕಿಂತ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಕಂಡು ಬಂದಿದೆ. ಆದರೆ ನಗರದಲ್ಲಿ ಯಾವುದೇ ರೀತಿಯ



ತೊಂದರೆ ಇಲ್ಲದೆ ಈ ಸಾಲಿನ ಬೇಸಿಗೆಯನ್ನು ಕಳೆಯಲಾಗಿದೆ, ಆದರೆ ಮುರುಘಾಮಠದಿಂದ ಸಿರಿಗೆರೆ ಮತ್ತು ಮಾಳಪ್ಪನಹಟ್ಟಿಯಿಂದ ಜಾನಕೊಂಡದವರೆಗೆ ನೀರಿನ ಭವಣೆ ಹೆಚ್ಚಾಗಿದ್ದು ನೀರಿಗಾಗಿ ಪರದಾಡುವ ಸ್ಥಿತಿ ಉಂಟಾಗಿದೆ ಎಂದ ಶಾಸಕರು ತಿಳಿಸಿದರು.ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ 73 ಕೊಳವೆಬಾವಿಗಳನ್ನು ಕೊರೆಯಲಾಗಿದ್ದು ಇದಕ್ಕಾಗಿ 8 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ, ಇದರ ಜೊತೆಯಲ್ಲಿ ಕಳೆದ 5 ತಿಂಗಳಿಂದ 69 ಗ್ರಾಮಗಳಿಗೆ ಪ್ರತಿ ದಿನ ನಗರದಿಂದ ನೀರನ್ನು ನೀಡಲಾಗುತ್ತಿದೆರಿದರ ಜೊತೆಯಲಿ ಚಿತ್ರದುರ್ಗ ನಗರದಲ್ಲಿ ಕುಡಿಯುವ ನೀರಿಗಾಗಿ 73 ಕೊಳವೆಬಾವಿಗಳನ್ನು ಕೊರೆಯಿಸಲಾಗಿದ ಎಂದು ತಿಳಿಸಿ, ಶಾಂತಿಸಾಗರಕ್ಕೆ ಎರಡುವರೆ ಟಿ.ಎಂ.ಸಿ. ನೀರನ್ನು ಬಿಡಲು ಸರ್ಕಾರ ಸೂಚನೆ ನೀಡಿದೆ.ಇದರಿಂದ ನೀರಿನ ಭವಣೆ ಕಡಿಮೆಯಾಗಲಿದೆ, ಅಲ್ಲದೆ ಹಿರೇಗುಂಟನೂರು ಗ್ರಾಮದ ಕೆರೆಗಳಿಗೆ ನೀರು ಬರಲಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಬಡವರಿಗಾಗಿ ಮನೆಗಳನ್ನು ನೀಡುತ್ತಿದೆ, ಮನೆಯ ಖಾತೆ ಇದ್ದು

> ಚಿತ್ರದುರ್ಗ ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುತ್ತಿರುವ ಶಾಂತಿಸಾಗರಕ್ಕೆ ಎರಡುವರೆ ಟಿಎಂಸಿ ನೀರು ಬಿಡಲು ಸರ್ಕಾರ ಆದೇಶಿಸಿದೆ. ಇದರಿಂದ ನಗರದಲ್ಲಿ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಲಿದೆ. ಶಾಂತಿಸಾಗರ ಯೋಜನೆ ಜಾರಿಗೆ ಬರದೆ ಇದಿದ್ದರೆ ನಗರದಲ್ಲಿ ನೀರಿನ ಸಮಸ್ಯೆ ಊಹಿಸಿಕೊಳ್ಳಲೂ ಕಷ್ಟವಾಗುತ್ತಿತ್ತು. ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ ಯೋಜನೆ ಅನುಷ್ಠಾನಗೊಳಿದ್ದರಿಂದ ಶಾಶ್ವತ ಪರಿಹಾರ ಸಿಕ್ಕಿದೆ.
>
> ■ **ಜಿ.ಹೆಚ್.ತಿಪ್ಪಾರೆಡ್ಡಿ,** ಶಾಸಕು, ಚಿತ್ರದುರ್ಗ ವಿಧಾನಸಭಾ ಕ್ಷೇತ್ರ

## ಮನೆ ಮನೆಗೆ ಪೈಪ್‌ಲೈನ್‌ನಲ್ಲಿ ಅನಿಲ ಪೂರೈಕೆ

**ಬೆಂಗಳೂರು**

ಬಹು ನಿರೀಕ್ಷಿತ ಮನೆ ಮನೆಗೆ ಪೈಪ್‌ಲೈನ್‌ನಲ್ಲಿ ಅನಿಲ ಪೂರೈಕೆ ಯೋಜನೆಯನ್ನು ನಗರದಲ್ಲಿ ಭಾನುವಾರ ಕೇಂದ್ರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಉದ್ಘಾಟಿಸಿದರು.

ಇದೇ ವೇಳೆ ಮುಂದಿನ 5 ವರ್ಷಗಳಲ್ಲಿ 1.32 ಲಕ್ಷ ಮನೆಗಳಿಗೆ ದಿನದ 24 ಗಂಟೆಯೂ ಅನಿಲ ಪೂರೈಕೆಯ ಗುರಿಯನ್ನು ಗೇಲ್ ಇಂಡಿಯಾ ಹೊಂದಿದೆ. ಮನೆಮನೆಗೆ ಅನಿಲ ಪೂರೈಸುವ ಮಹತ್ವದ ಯೋಜನೆಯನ್ನು ವೇದಿಕೆಯಲ್ಲಿ ಒಲೆ ಹತ್ತಿಸುವ ಮೂಲಕ ಚಾಲನೆ ನೀಡಲಾಯಿತುಹೆಚ್ ಎಸ್‌ಆರ್ ಬಡಾವಣೆಯಲ್ಲಿ ನಡೆದ ಈ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ರಾಸಾನಿಯಕ ಹಾಗೂ ಗೊಬ್ಬರ ಸಚಿವ ಅನಂತ್‌ಕುಮಾರ್, ಕೇಂದ್ರದ ಕಾರ್ಯಕ್ರಮ ಅನಷ್ಠಾನ ಸಚಿವ ಡಿ.ವಿ ಸದಾನಂದಗೌಡ, ಸಂಸದ ಪಿ.ಸಿ ಮೋಹನ್, ಶಾಸಕ ಸತೀಶ್ ರೆಡ್ಡಿ ಭಾಗವಹಿಸಿದ್ದರು.

ನಗರದಲ್ಲಿ ಈ ಯೋಜನೆ ಜಾರಿಯಿಂದ ನಾಗರಿಕರು ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಪಡೆಯಬಹುದಾಗಿದೆ. ಸಿಲಿಂಡರ್ ಬುಕ್ ಮಾಡುವ, ಸಿಲಿಂಡರ್‌ಗಳನ್ನು ಮನೆಯಲ್ಲಿಟ್ಟುಕೊಳ್ಳುವ ಕಿರಿಕಿರಿಗಳು ತಪ್ಪಲಿದೆ.ಪೈಪ್‌ಲೈನ್ ಮೂಲಕ ಅನಿಲ ಬಳಸುವ ನಾಗರಿಕರು ಪ್ರತಿ 2 ತಿಂಗಳಿಗೊಮ್ಮೆ ಬಳಸಿದ ಅನಿಲದ ಹಣ ಪಾವತಿ ಮಾಡಬೇಕು.

ನಗರದಲ್ಲಿ ಈಗಾಗಲೇ 66 ಕಿ.ಮೀ ಉದ್ದದ ಸ್ಟೀಲ್ ಮತ್ತು 452 ಕಿ.ಮೀ ಉದ್ದದ ಎಂಡಿಪಿಇ ಪೈಪ್‌ಲೈನ್ ಅಳವಡಿಕೆ ಪೂರ್ಣಗೊಂಡಿದೆ. ಈಗಾಗಲೇ 34,500 ಮನೆಗಳ ಪೈಕಿ 23 ಸಾವಿರ ಮನೆಗಳಿಗೆ ಈ ಸಂಪರ್ಕ ಕಲ್ಪಿಸಲಾಗಿದ್ದು, 3 ಸಾವಿರಕ್ಕೂ ಅಧಿಕ ಮನೆಗಳಲ್ಲಿ ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಬಳಕೆ ಮಾಡಲಾಗುತ್ತಿದೆ.

ಇದಲ್ಲದೆ ನಗರದಲ್ಲಿರುವ ದೊಡ್ಡ ದೊಡ್ಡ ಉದ್ಯಮಗಳು, ಐಟಿ ಕಂಪನಿಗಳು ಸಹ ಈ ಪೈಪ್‌ಲೈನ್ ಸಂಪರ್ಕ ಪಡೆದುಕೊಂಡಿವೆ. ಅನಿಲ ಪೂರೈಕೆಗಾಗಿ ಲಗ್ಗೆರೆಯಲ್ಲಿ ಸಿಎನ್‌ಜಿ ಸ್ಟೇಷನ್ ಆರಂಭಿಸಲಾಗಿದೆ.

ಸುಮನಹಳ್ಳಿ, ಹೆಣ್ಣೂರು ಮತ್ತು ಪೀಣ್ಯದ ಬಿಎಂಟಿಸಿ ಬಸ್ ಡಿಪೋಗಳಲ್ಲಿ ಇನ್ನು ಸಿಎನ್‌ಜಿ ಸ್ಟೇಷನ್‌ಗಳು ಆರಂಭವಾಗಲಿದೆ. ನಗರದಲ್ಲಿ 60 ಸಿಎನ್‌ಜಿ ಸ್ಟೇಷನ್‌ಗಳನ್ನು ಆರಂಭ ಮಾಡುವುದರಿಂದ ಸಾರಿಗೆ ವಾಹನಗಳಿಗೆ ಕಡಿಮೆ ದರದಲ್ಲಿ ಇಂಧನ ದೊರಕುವುದಲ್ಲದೆ ಪರಿಸರ ಮಾಲಿನ್ಯಮುಕ್ತ ವಾತಾವರಣ ನಿರ್ಮಾಣ ಮಾಡಲು ಈ ಸಿಎನ್‌ಜಿ ನೆರವಾಗಲಿದೆ.

ಈ ಯೋಜನೆಯ ಮೂಲಕ ನಗರದ 1 ಕೋಟಿ ಜನರಿಗೆ, ಕೈಗಾರಿಕೆಗಳಿಗೆ, ವಾಣಿಜ್ಯ ಘಟಕಗಳಿಗೆ ಪೈಪ್ ಲೈನ್ ಮೂಲಕ ಪರಿಸರ ಸ್ನೇಹಿ, ಸುರಕ್ಷಿತ, ನೈಸರ್ಗಿಕ ಅನಿಲ ಪೂರೈಕೆಯಾಗಲಿದೆ.

ಪೈಪ್‌ಲೈನ್ ಮೂಲಕ ಅನಿಲ ಪೂರೈಸುವ ಯೋಜನೆಯನ್ನು ಗೇಲ್ ಇಂಡಿಯಾ ಲಿಮಿಟೆಡ್ ಸುಮಾರು 6 ಸಾವಿರ ಕೋಟಿ ರೂ.ವೆಚ್ಚದಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶದ ಒಟ್ಟು 4395 ಚದರ ಕಿ.ಮೀ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲಿದ್ದು, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕುಗಳ ಜನರಿಗೆ ಅನುಕೂಲವಾಗಲಿದೆ.

## ಬ್ಯಾಡ್ಮಿಂಟನ್ ಕಿದಂಬಿ ಶ್ರೀಕಾಂತ್‌ಗೆ ಪ್ರೀಮಿಯರ್ ಕಿರೀಟ

**ಜಕಾರ್ತ**

ಭಾರತದ ಭರವಸೆಯ ಆಟಗಾರ ಕಿದಂಬಿ ಶ್ರೀಕಾಂತ್ ಇಂಡೊನೇಷ್ಯಾ ಸೂಪರ್ ಸೀರಿಸ್ ಪ್ರೀಮಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ 24 ವರ್ಷ ವಯಸ್ಸಿನ ಭಾರತದ ಆಟಗಾರ ಶ್ರೀಕಾಂತ್ ಜಪಾನ್‌ನ ಕಜು ಮಸಾ ಸಕ್ಕೈ ಅವರ ವಿರುದ್ಧ ಗೆಲುವು ಸಾಧಿಸಿ ಚಾಂಪಿಯನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಅತ್ಯಂತ ಕುತೂಹಲದ ಪಂದ್ಯದಲ್ಲಿ ಅಮೋಘ ಸಾಮರ್ಥ್ಯದಿಂದ ಆಡಿದ ವಿಶ್ವದ 22ನೇ ಶ್ರೇಯಾಂಕದ ಶ್ರೀಕಾಂತ್ ಅವರು 37 ನಿಮಿಷಗಳ ಹೋರಾಟದಲ್ಲಿ ಕಜು ಮಸಾ ಸಕ್ಕೈ ಅವರ ವಿರುದ್ಧ 21-11, 21-19ರಲ್ಲಿ ಜಯ ಸಾಧಿಸಿದರು.

ಶ್ರೀಕಾಂತ್ ಅವರಿಗೆ ಸಂದ ಎರಡನೇ ಸೂಪರ್ ಸೀರಿಸ್ ಪ್ರೀಮಿಯರ್ ಪ್ರಶಸ್ತಿ ಇದಾಗಿದೆ. 2014ರಲ್ಲಿ ಚೀನಾ ಓಪನ್‌ನಲ್ಲಿ ಸೂಪರ್ ಸೀರಿಸ್ ಪ್ರೀಮಿಯರ್ ಗೆಲುವು ಪಡೆದಿದ್ದರು.

## ವಿಶ್ವ ಹಾಕಿ ಲೀಗ್ ಪಾಕಿಸ್ತಾನವನ್ನು ಬಗ್ಗುಬಡಿದ ಭಾರತ

**ಲಂಡನ್**

ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಹಾಕಿ ಲೀಗ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಭಾರತ ಬಗ್ಗು ಬಡಿದು ತನ್ನ ಗೆಲುವಿನ ನಾಗಲೋಟವನ್ನು ಮುಂದುವರೆಸಿದೆ. ಭಾನುವಾರ ಪುರುಷರ ವಿಶ್ವ ಹಾಕಿ ಲೀಗ್ ನಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಸಾಂಘಿಕ ಹೋರಾಟದ ನೆರವಿನಿಂದ ಭಾರತ 7-1 ಅಂತರದಿಂದ ಗೆಲುವು ಸಾಧಿಸಿದೆ. ಹರ್ಮನ್ ಪ್ರೀತ್ ಸಿಂಗ್ 13 ಮತ್ತು 33ನೇ ನಿಮಿಷಗಳಲ್ಲಿ ಗೋಲು ಗಳಿಸಿದರೆ, ತಲ್ವಿಂದರ್ 21 ಮತ್ತು 24, ಆಕಾಶ್ ದೀಪ್ ಸಿಂಗ್ 47 ಮತ್ತು 48 ನಿಮಿಷಗಳಲ್ಲಿ ತಲಾ ಎರಡು ಗೋಲುಗಳನ್ನು ಬಾರಿಸಿದರು. ಇನ್ನು ಪ್ರದೀಪ್ 49ನೇ ನಿಮಿಷದಲ್ಲಿ ಏಕೈಕ ಗೋಲು ಬಾರಿಸಿದರು. ಹರ್ಮನ್ ಪ್ರೀತ್ ಸಿಂಗ್ ಹಾಗೂ ತಲ್ವಿಂದರ್ ಸಿಂಗ್ ಸಹಾಸದದಿಂದ ಮೊದಲಾರ್ಧದಲ್ಲಿ ಭಾರತ 3-0 ಅಂತರದಿಂದ »2ನೇ ಪುಟಕ್ಕೆ

## ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಭಾರತಕ್ಕೆ ಹೀನಾಯ ಸೋಲು

**ಸ್ಕೋರ್ ವಿವರ**

ಪಾಕಿಸ್ತಾನ : 338/4 (50)
ಭಾರತ : 158/10(30.3)

**ಕೆನ್ನಿಂಗ್ಟನ್ ಓವಲ್**

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯದ ಫೈನಲ್ ಪಂದ್ಯದಲ್ಲಿ ಭಾರತ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ 180 ರನ್‌ಗಳ ಹೀನಾಯ ಸೋಲು ಅನುಭವಿಸಿದೆ. ಐಸಿಸಿ ಪ್ರಾಯೋಜಿತ ಕ್ರಿಕೆಟ್ ಟೂರ್ನಮೆಂಟ್ಗಳಲ್ಲಿ ತನ್ನ ಬದ್ಧ ಎದುರಾಳಿ ಪಾಕಿಸ್ತಾನದ ವಿರುದ್ಧ ಇದುವರೆಗೂ ಅಜೇಯವಾಗಿಯೇ ಇದ್ದ ಟಿಂ ಇಂಡಿಯಾದ ಗೆಲುವಿನ ಸರಣಿ ಇಂದು ಮುರಿಯಲ್ಪಟ್ಟಿದೆ. ಅದೂ 180 ರನ್ನುಗಳ ಹೀನಾಯ ಸೋಲಿನ ಮೂಲಕ. ಅತ್ತ ಪಾಕಿಸ್ತಾನ ಮಾತ್ರ ತನ್ನ ಸಂಘಟಿತ ಹೋರಾಟದ ಮೂಲಕ ಭಾರತವನ್ನು ಭರ್ಜರಿಯಾಗಿ ಮಣಿಸಿ ಹತ್ತು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಚೊಚ್ಚಲ ಟಿ-20 ವಿಶ್ವಕಪ್ ಫೈನಲ್ಲಲ್ಲಿ ಅನುಭವಿಸಿದ್ದ ಸೋಲಿಗೆ ಆಂಗ್ಲರ ನಾಡಿನಲ್ಲಿ ಭರ್ಜರಿಯಾಗಿಯೇ ಸೇಡು ತೀರಿಸಿಕೊಂಡಿದೆ.

ಟಾಸ್ ಗೆದ್ದರೂ ಬ್ಯಾಟಿಂಗ್ ನಡೆಸದೇ ಎದುರಾಳಿಗೆ ಬ್ಯಾಟಿಂಗ್ ಬಿಟ್ಟುಕೊಟ್ಟ ತಪ್ಪಿಗೆ ನಾಯಕ ವಿರಾಟ್ ಕೊಹ್ಲಿ ಸರಿಯಾದ ಬೆಲೆಯನ್ನೇ ತೆತ್ತಿದ್ದಾರೆ. ಪಾಕಿಸ್ತಾನ ನೀಡಿದ 338 ರನ್ನುಗಳ ಭರ್ಜರಿ ಸವಾಲನ್ನು ಬೆನ್ನಟ್ಟಲಾರಂಭಿಸಿದ ಭಾರತಕ್ಕೆ ವೇಗಿ ಮಹಮ್ಮದ್ ಅಮೀರ್ ಎಸೆದ ಪ್ರಥಮ ಓವರಿನಲ್ಲೇ ಆಘಾತ ಕಾದಿತ್ತು. ತಂಡದ ಖಾತೆ ತೆರೆಯುವಷ್ಟರಲ್ಲಿ ರೋಹಿತ್ ಶರ್ಮಾ (0) ಲೆಗ್ ಬಿಫೋರ್ ಬಲೆಗೆ ಬಿದ್ದರು. ಮತ್ತೆ ಬಂದ ನಾಯಕ ಕೊಹ್ಲಿ (5) ತನಗೆ ಸಿಕ್ಕಿದ ಜೀವದಾನದ ಲಾಭವನ್ನೆತ್ತಲಾಗದೇ ಮುಂದಿನ ಎಸೆತದಲ್ಲಿಯೇ ಕ್ಯಾಚ್ ನೀಡಿ ನಿರ್ಗಮಿಸಿದರು. ಧವನ್ (21) ಹಾಗೂ ಯುವರಾಜ್ (22) ಅಳುಕತ್ತಲೇ ಆಡುತ್ತ ಜೊತೆಯಾಟ ಬೆಳೆಸಲು



ಯತ್ನಿಸಿದಾದರೂ ಇವರ ಆಟ ಪಾಕ್ ಬೌಲರ್ ಗಳ ಮುಂದೆ ಬಹಳಷ್ಟು ಹೊತ್ತು ನಡೆಯಲಿಲ್ಲ, 21 ರನ್ ಗಳಿಸಿದ್ದ ಧವನ್ ಅಮೀರ್ ಗೆ ವಿಕೆಟ್ ಒಪ್ಪಿಸಿದರೆ ಸ್ವಲ್ಪ ಹೊತ್ತಿನಲ್ಲೇ ಯುವರಾಜ್ ನಿರ್ಗಮಿಸಿದರು. ಅಲ್ಲಿಗೆ ಭಾರತದ ಅವಸ್ಥೆ 54-4 ಆಗಿತ್ತು. ಗ್ರೇಟ್ ಫಿನಿಶರ್ ಖ್ಯಾತಿಯ ಧೋನಿ ಮಾಡಿದ್ದು ನಾಲಕ್ಕೇ ರನ್, ಅವರೂ ಸಹ ಯುವಿ ಬೆನ್ನಲ್ಲೇ ನಿರ್ಗಮಿಸಿ ಭಾರತದ ಪತನದ ಬಾಲವನ್ನು ಬೆಳೆಸಿದರು. ಮತ್ತೆ ಬಂದ ಕೇದಾರ್ ಜಾಧವ್ ಆಟ 9ರನ್ನಿಗೇ ಮುಗಿಯಿತು.

72 ಕ್ಕೆ 6 ಎಂಬ ಶೋಚನೀಯ ಪರಿಸ್ಥಿತಿಯಲ್ಲಿದ್ದ ಭಾರತದ ಬ್ಯಾಟಿಂಗ್ ಸರಣಿಗೆ ಸ್ವಲ್ಪ ಜೀವ ತುಂಬಿದವರು ಹಾರ್ಧಿಕ್ ಪಾಂಡ್ಯ (76 ರನೌಟ್). ತಮ್ಮ ಬಿರುಸಿನ ಇನ್ನಿಂಗ್ಸ್ ನಲ್ಲಿ ಈ ಯುವ ಆಟಗಾರ ಎದುರಿಸಿದ್ದು 43 ಎಸೆತಗಳನ್ನು, ಇದರಲ್ಲಿ 4 ಬೌಂಡರಿ ಮತ್ತು 6 ಭರ್ಜರಿ ಸಿಕ್ಸರ್ ಮೂಲಕ 76 ರನ್ ಸಿಡಿಸಿ ಇಲ್ಲದ ರನ್ನಿಗೆ ಓಡಿ ಪಂದ್ಯದ ನಿರ್ಣಾಯಕ ಹಂತದಲ್ಲಿ ರನೌಟ್ ಆಗಿ ನಿರ್ಗಮಿಸಿದರು. ಆಗ ಭಾರತದ ಸ್ಕೋರ್ ಬೋರ್ಡ್ 152 ಕ್ಕೆ 7 ಆಗಿತ್ತು.

ಕೊನೆಯಲ್ಲಿ ಜಡೇಜಾ (15), » 2ನೇ ಪುಟಕ್ಕೆ

## ವಾಲ್ಮೀಕಿ ಜನತೋತ್ಸವ ಪೂರ್ವಭಾವಿ ಸಭೆಯಲ್ಲಿ ಹೊದಿಗೆರೆ
## ಜೆಡಿಎಸ್ ಬೆಂಬಲಿಸಿ ಋಣಮುಕ್ತರಾಗಲು ಕರೆ

**ದಾವಣಗೆರೆ**

ವಾಲ್ಮೀಕಿ ನಾಯಕ ಸಮುದಾಯದ ಮೇಲೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್‌ನ ಋಣವಿದ್ದು, ವಾಲ್ಮೀಕಿ ನಾಯಕ ಸಮಾಜಬಾಂಧವರು ಋಣಮುಕ್ತರಾಗಲು 2018ರ ವಿಧಾನಸಭಾ ಚುನಾವಣೆಯಲ್ಲಿ ಜಾತ್ಯಾತೀತ ಜನತಾ ದಳ ಪಕ್ಷವನ್ನು ಬೆಂಬಲಿಸಿ ಅಧಿಕಾರಕ್ಕೆ ತರಬೇಕೆಂದು ರಾಜ್ಯ ಜೆಡಿಎಸ್‌ನ ಎಸ್‌ಟಿ ಘಟಕದ ಅಧ್ಯಕ್ಷ ಹೊದಿಗೆರೆ ರಮೇಶ್ ಕರೆ ನೀಡಿದರು.

ನಗರದ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಭಾನುವಾರ ಜು.1ರಂದು ಜೆಡಿಎಸ್ ನಿಂದ ನಗರದಲ್ಲಿ ಆಯೋಜಿಸಲುದ್ದೇಶಿಸಿರುವ ವಾಲ್ಮೀಕಿ ಜನೋತ್ಸವ ಕಾರ್ಯಕ್ರಮದ ಕುರಿತು ಚರ್ಚಿಸಲು ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ಪರಿಶಿಷ್ಟ ಪಂಗಡದ ಪಟ್ಟಿಗೆ ವಾಲ್ಮೀಕಿ ಹಾಗೂ ನಾಯಕ ಎಂಬ ಪದ ಸೇರಲು ಮಾಜಿ ಪ್ರಧಾನಿ ದೇವೇಗೌಡರು ಕಾರಣೀಭೂತರಾಗಿದ್ದು, ಅವರು ನಮ್ಮನ್ನು ಎಸ್‌ಟಿ ಪಟ್ಟಿಗೆ ಸೇರಿಸಿದ್ದರ ಭಾಗವಾಗಿ ಇಂದು ಸಮಾಜದ 15 ಜನ ಶಾಸಕರಾಗಿದ್ದಾರೆ. ಅಸಂಖ್ಯಾತರು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ, ಸರ್ಕಾರದ ವಿವಿಧ ಸೌಲಭ್ಯ ಪಡೆದು ಅನೇಕರು ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಅಲ್ಲದೆ, ವಾಲ್ಮೀಕಿ ಗುರುಪೀಠ ಸ್ಥಾಪನೆಗೆ ಎಚ್.ಡಿ.ಕುಮಾರಸ್ವಾಮಿಯವರು ರಾಜನಹಳ್ಳಿಯಲ್ಲಿ 8 ಎಕರೆ ಭೂಮಿ ಕೊಡಿಸಿದಲ್ಲದೆ, ಶ್ರೀಮಠ ನಿರ್ಮಾಣಕ್ಕೆ ನೆರವು ನೀಡಿದ್ದಾರೆ. ಅಲ್ಲದೆ, ಅವರು ಮುಖ್ಯಮಂತ್ರಿಯಾದಾಗ ವಾಲ್ಮೀಕಿ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದರು. ಹೀಗಾಗಿ ನಮ್ಮ ಸಮಾಜದ ಮೇಲೆ ದೇವೇಗೌಡರ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರ ಋಣವಿದೆ ಎಂದು ಹೇಳಿದರು.

ಬಿಲ್ವಿದ್ಯೆ ಕಲಿಸದ ದ್ರೋಣಾಚಾರ್ಯರಿಗೆ ಗುರುವನ್ನಾಗಿ ಸ್ವೀಕರಿಸಿ, ಗುರು ದಕ್ಷಣೆಯನ್ನಾಗಿ ಹೆಬ್ಬೆಟ್ಟು ಕೊಟ್ಟು ಏಕಲವ್ಯನ ಸಮಾಜಕ್ಕೆ ಸೇರಿದವರಾಗಿದ್ದೇವೆ. ಬಿಲ್ವಿದ್ಯೆ ಕಲಿಸದೆಯೇ ಇದ್ದರೂ ಗುರುವಿನ ಋಣ ತೀರಿಸಲು ಹೆಬ್ಬೆಟ್ಟು ಕೊಟ್ಟ ಪರಂಪರೆ ನಮ್ಮದ್ದಾಗಿದೆ. ಆದರೆ, ಎಚ್.ಡಿ.ದೇವೇಗೌಡರು, ಎಚ್ » 2ನೇ ಪುಟಕ್ಕೆ

> ಪರಿಶಿಷ್ಟ ಪಂಗಡಕ್ಕೆ ಪ್ರಸ್ತುತ ಶೇ.3ರಷ್ಟು ಮೀಸಲಾತಿ ಇದೆ. ಈಗಲೇ ಎಸ್‌ಟಿಯಲ್ಲಿ 58 ಜಾತಿಗಳಿದ್ದು, ಸಮಾಜಬಾಂಧವರು ಸೌಲಭ್ಯ ಪಡೆಯಲು ಪರದಾಡುತ್ತಿದ್ದಾರೆ. ಇಂಥಹ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಸ್‌ಟಿ ಪಟ್ಟಿಗೆ ನಮ್ಮ ಸಹೋದರ ಜಾತಿಗಳಾದ ಉಪ್ಪಾರರು, ಕಾಡು ಕುರುಬರು ಸೇರಿದಂತೆ ಇತರೆ ಜಾತಿಗಳನ್ನು ಸೇರಿಸಲು ಮುಂದಾಗಿದ್ದಾರೆ. ಎಸ್‌ಟಿ ಪಟ್ಟಿಗೆ ಬೇರೆ ಜಾತಿಗಳಿಗೆ ಸೇರಿಸಲು ನಮ್ಮ ವಿರೋಧವಿಲ್ಲ, ಆದರೆ, ಜನಸಂಖ್ಯೆಗೆ ಅನುಗುಣವಾಗಿ ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು.
>
> ■ **ಹೊದಿಗೆರೆ ರಮೇಶ್,** ಅಧ್ಯಕ್ಷ, ರಾಜ್ಯ ಜೆಡಿಎಸ್ ಎಸ್‌ಟಿ ಘಟಕ.

## ಶಿಸ್ತುಬದ್ಧ ಬದುಕಿಗೆ ಯೋಗ ಸಹಕಾರಿ: ಡಿಸಿ ರಮೇಶ್

**ದಾವಣಗೆರೆ**

ಮನುಷ್ಯನ ಬದುಕು ಶಿಸ್ತುಬದ್ಧವಾಗಿ ರಬೇಕಾದರೆ, ಯೋಗ ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ಬಡಾವಣೆಯ ಲಯನ್ಸ್ ಕ್ಲಬ್ ಆವರಣದಲ್ಲಿ ಜಿಲ್ಲಾ ಯೋಗ ಒಕ್ಕೂಟ ಹಾಗೂ ಜಿಲ್ಲಾ ಆಯುಷ್ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ 3ನೇ ವಿಶ್ವಯೋಗ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಯೋದ ಸ್ಪರ್ಧೆಯನ್ನು ಯೋಗಾಸನ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

> ಪ್ರಸ್ತುತ ಎಲ್ಲರೂ ಒತ್ತಡದ ಜೀವನಕ್ಕೆ ಒಳಗಾಗಿದ್ದಾರೆ. ಹೀಗಾಗಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಎಲ್ಲರಿಗೂ ಉತ್ತಮ ಆರೋಗ್ಯಬೇಕಾಗಿದೆ. ಈ ಉತ್ತಮ ಆರೋಗ್ಯ ಪಡೆಯಬೇಕಾದರೆ ಯೋಗಾಸನ ಅವಶ್ಯವಾಗಿದ್ದು, ಆದ್ದರಿಂದ ಸರ್ಕಾರ ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ಪಾಠ-ಪ್ರವಚನದ ಜೊತೆಗೆ ಯೋಗ ಕಲಿಸುವತ್ತವೂ ಗಮನ ಹರಿಸಬೇಕಿದೆ.
>
> ■ **ದಿನೇಶ್ ಕೆ. ಶೆಟ್ಟಿ,** ಪಾಲಿಕೆ ಸದಸ್ಯ.

ಇಂದು ಜಾತೀಕರಣದ ಪೈಪೋಟಿಯ ಜೀವನದಲ್ಲಿ ಮನುಷ್ಯ ಆರೋಗ್ಯಕ್ಕೆ ಒತ್ತು ನೀಡುತ್ತಿಲ್ಲ. ಯಾರೂ ನಮ್ಮ ಆರೋಗ್ಯ, ದೇಹ ಮತ್ತು ಮನಸ್ಸಿ ಸ್ಥಿತಿಯ ಬಗ್ಗೆ ಚಿಂತನೆಯೇ ಮಾಡುತ್ತಿಲ್ಲ. ಹೀಗಾಗಿ ವಿವಿಧ ರೋಗ-ರುಜಿನಗಳಿಗೆ ಮನುಷ್ಯ ತುತ್ತಾಗುತ್ತಿದ್ದಾನೆ.



ಹೀಗಾಗಿ ಮನುಷ್ಯ ಆರೋಗ್ಯದ ಕಡೆಗೆ ಗಮನ ಹರಿಸುವುದರ ಜೊತೆಗೆ ಶಿಸ್ತು ಬದ್ಧ ಜೀವನ ನಡೆಸಬೇಕಾಗಿದೆ. ಇಂತಹ ಶಿಸ್ತುಬದ್ಧ ಜೀವನಕ್ಕೆ ಯೋಗ ಸಹಕಾರಿಯಾಗಿದೆ ಎಂದರು.

ದಿನದ 10ರಿಂದ 15 ನಿಮಿಷವಾದರೂ ಯೋಗಾಭ್ಯಾಸಕ್ಕೆ ಸಮಯ ಮೀಸಲಿಟ್ಟರೆ, ನಮ್ಮ ಆರೋಗ್ಯ ವೃದ್ಧಿಯ ಜೊತೆಗೆ ಜೀವನದಲ್ಲಿ ಸಾಧನೆಯನ್ನು ಮಾಡಬಹುದಾಗಿದೆ. ಮಾನಸಿಕ ಹಿಡಿತ ಸಾಧಿಸಲು ಯೋಗ ನೆರವಾಗಲಿದೆ. ಮಕ್ಕಳನ್ನು ಚಿಕ್ಕ ವಯಸ್ಸಿನಿಂದಲೇ ಯೋಗದಲ್ಲಿ ತೊಡಗಿಸಿದರೆ, ಮುಂದೆ ಉತ್ತಮ ಆರೋಗ್ಯ ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಹುಟ್ಟಿನಿಂದ ಸಾವಿನ ವರೆಗೂ ನಮ್ಮ ಜೀವ ಇರುವುದೇ ಒಂದು ಯೋಗ. ಈ ಯೋಗದಲ್ಲಿ ನಮ್ಮ ಭವಿಷ್ಯ ಮತ್ತು ಆರೋಗ್ಯ ಅಡಗಿದೆ. ಆದರೆ, ಇದನ್ನು ಯಾರೂ ಸಹ ಹುಡುಕುವ ಪ್ರಯತ್ನ ಮಾಡುತ್ತಿಲ್ಲ. ಪ್ರತಿಯೊಂದು ಜೀವಿಯೂ ಜೀವಿಸಲು ಪ್ರಕೃತಿ ಅಪಾರ ಕೊಡುಗೆ ನೀಡಿದೆ. ಇಂತಹ ಪ್ರಕೃತಿಯ ಜೊತೆಗೆ ನಮ್ಮ ಒಡನಾಟ ಇರುವ ವರೆಗೂ ನಮ್ಮ ಜೀವನ ಉತ್ತಮವಾಗಿರುತ್ತದೆ. ಮನುಷ್ಯ ಇಲ್ಲದಿದ್ದರೂ ಪ್ರಕೃತಿ ಮತ್ತು ವಿಶ್ವ ಇರುತ್ತೆ. ಆದರೆ, ಇವೆರಡೂ ಇಲ್ಲದಿದ್ದರೆ ಮನುಷ್ಯ ಬದುಕಲು ಸಾಧ್ಯವಿಲ್ಲ. ಹೀಗಾಗಿ ನಮ್ಮ ಆಲೋಚನೆ ಬದಲಿಸಿಕೊಂಡು ಪ್ರಕೃತಿಯ ಜೊತೆಗೆ ಉತ್ತಮ ಒಡನಾಟ ಇರಿಸಿಕೊಳ್ಳಬೇಕಾಗಿದೆ ಎಂದರು.

ಪಾಲಿಕೆ ಸದಸ್ಯ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಪ್ರಸ್ತುತ ಎಲ್ಲರೂ ಒತ್ತಡದ ಜೀವನಕ್ಕೆ ಒಳಗಾಗಿದ್ದಾರೆ. ಹೀಗಾಗಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಎಲ್ಲರಿಗೂ ಉತ್ತಮ ಆರೋಗ್ಯಬೇಕಾಗಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಯೋಗ ಒಕ್ಕೂಟದ ವಾಸುದೇವ ರಾಯ್ಕರ್, ಶಿವಪ್ಪ, ಲಯನ್ಸ್ ಕ್ಲಬ್‌ನ ಬೆಳ್ಳೂಡಿ ಶಿವಕುಮಾರ್, ಜಿ.ನಾಗನೂರು, ಆಯುಷ್ ಅಧಿಕಾರಿ ಡಾ.ಯು.ಸಿದ್ದೇಶ್, ಪ್ರಭುದೇವ್, ರಾಜು ಬದ್ದಿ, ಪ್ರಕಾಶ್ ಉತ್ತಂಗಿ, ತೀರ್ಥರಾಜ್ ಹೋಲೂರು, ಮಹಾದೇವ್ ಗೌಡ್ರು, ಬಾದಮಿ ಜಯಣ್ಣ, ನೀಲಪ್ಪ ಇದ್ದರು.

## ಡಾ.ಎಚ್. ವಿಶ್ವನಾಥ್‌ಗೆ ಡಿ.ಲಿಟ್



**ದಾವಣಗೆರೆ**

ಶಿಕ್ಷಣ ಮತ್ತು ಜಾನಪದ ತಜ್ಞ, ದಾವಣಗೆರೆ ವಿವಿಯ ಸಿಂಡಿಕೇಟ್ ಸದಸ್ಯರು ಹಾಗೂ ಕರ್ನಾಟಕ ಜಾನಪದ ಪರಿಷತ್‌ನ ಜಿಲ್ಲಾಧ್ಯಕ್ಷರಾಗಿರುವ ಡಾ.ಎಚ್. ವಿಶ್ವನಾಥ್ ಅವರಿಗೆ ದಕ್ಷಿಣ ಅಮೇರಿಕಾ ವಿಶ್ವ ವಿದ್ಯಾನಿಲಯ ಡಿ.ಲೀಟ್ ಪದವಿ ಪ್ರದಾನ ಮಾಡಿದೆ. ಡಾ.ಎಚ್. ವಿಶ್ವನಾಥ್ ಅವರ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಯನ್ನು ಗುರುತಿಸಿ, ದಕ್ಷಿಣ ಅಮೇರಿಕಾ ವಿಶ್ವ ವಿದ್ಯಾನಿಲಯವು ಗೌರವ ಡಿ.ಲಿಟ್ ಪದವಿ ಪ್ರದಾನ ಮಾಡಿದ್ದು, ಇವರಿಗೆ ಜಾನಪದ ಪರಿಷತ್‌ನ ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ಅಭಿನಂದಿಸಿದೆ ಎಂದು ಪರಿಷತ್‌ನ ತಾಲ್ಲೂಕು ಅಧ್ಯಕ್ಷ ಶಶಿಧರ ಬಸಾಪುರ ತಿಳಿಸಿದ್ದಾರೆ.

